ಮೆಣಸಿನಕಾಯಿ ಪಟಾಕಿ ಎಂದು ಗೊತ್ತಿದ್ದ ಪಟಾಕಿಗಳೆಲ್ಲವೂ ಮತ್ತೆಮತ್ತೆ ಕನಸಿನಲ್ಲಿ ಕಂಡು ಮರೆಯಾದವು. ಕಿವಿಯ ಬಳಿ ಸಿಡಿಯುವ ಶಬ್ದ ಕೇಳಿ ಕಣ್ಣುಬಿಟ್ಟನು. ಒಂದು ಕಪ್ಪೆ ಉರುಳುತ್ತಾ ಗೋಡೆಗೆ ಶಬ್ದದೊಂದಿಗೆ ಡಿಕ್ಕಿಹೊಡೆದು ನಿಂತಿದ್ದನ್ನು ಅವನ ಕಣ್ಣುಗಳು ನೋಡಿದವು. ಮತ್ತೊಂದುಕಡೆ ಅಮ್ಮನನ್ನು ಅಪ್ಪ ಹೊಡೆಯುತ್ತಿದ್ದರು. ಕಿವಿಯಿಂದ ಕೇಳಲಾಗದಂತಹ ಬೈಗಳು. ಚಟ್ಟಂತ ಎದ್ದು ಓಡಿ 'ಬೇಡಪ್ಪ, ಬೇಡಪ್ಪ' ಎನ್ನುತ್ತ ಅವನು ಅವರನ್ನು ಹಿಡಿದು ಎಳೆದ. ಅಷ್ಟರಲ್ಲಿ ತಮ್ಮಂದಿರು ಎದ್ದು ಭೀತಿಯಿಂದ ಓ ಅಂತ ಶಬ್ದಮಾಡುತ್ತಾ ಅತ್ತರು. ಅಮ್ಮನ ಕೆನ್ನೆಗಳಿಗೆ ಅಪ್ಪ ಏಳೆಂಟು ಸಾರಿ ರಪರಪ ಎಂದು ಬಾರಿಸಿದರು. ಅಮ್ಮ ನಿಲ್ಲಲ್ಲಾಗದೆ ನೆಲಕ್ಕೆ ಸರಿದಳು. 'ಒಂದು ದಿನಾನಾದ್ರೂ ನಿನ್ಹತ್ರ ಮನುಷ್ಯ ನೆಮ್ಮದಿಯಾಗಿ ಇರೋದಿಕ್ಕೆ ಆಗುತ್ತಾ? ಹೆಂಗ್ಸಾ ನೀನು' ಎಂದು ಅವರು ಕೂಗಿದ ಪರಿಗೆ ಸೂರೇ ಅದುರಿತು. ಕೋಳಿಗಳನ್ನು ಮುಚ್ಚಿಟ್ಟಿದ್ದ ಕುಕ್ಕೆಯನ್ನು ಒದ್ದು ಬೈಯುತ್ತ ಮನೆಯನ್ನು ಬಿಟ್ಟು ಹೊರಗೆ ಹೋದರು. ಬಲಹೀನವಾಗಿ ಕೂಗುತ್ತ ಕೋಳಿಗಳು ದಿಕ್ಕಾಪಾಲಾಗಿ ಓಡಿದವು. ಹೊರಗೆ ಸೈಕಲನ್ನು ನೂಕಿಕೊಂಡು ಹೋಗುವ ಶಬ್ದ ಕೇಳಿಸಿತು.

ಮಾರನೆಯ ದಿನ ಅವರು ಮನೆಗೆ ಹಿಂತಿರುಗಲಿಲ್ಲ. ಅದರ ಮಾರನೆಯ ದಿನ ಶಾಲೆಯಲ್ಲಿ ಮಾದರಿ ಪರೀಕ್ಷೆ ಪ್ರಾರಂಭವಾಯಿತು. ಒಂದು ವಾರ ಅವನು ಬೇರೆ ಯಾವುದರ ಬಗ್ಗೆಯೂ ಯೋಚಿಸಲಾಗದಂತೆ ಪಾಠಗಳಲ್ಲಿ ಮುಳುಗಿಹೋದ. ಪ್ರತಿದಿನ ಸಂಜೆ ದೀಪದ ಚಿಮಣಿಗಳನ್ನು ತೊಳೆದು ಒರಸಿ ಸೀಮೆಯೆಣ್ಣೆ ಸುರಿಯುವಾಗ, ಅಪ್ಪನ ಸೈಕಲ್ ಬಂದು ಹೊಸಿಲಿನಲ್ಲಿ ನಿಲ್ಲುಬಹುದು ಅಂದುಕೊಳ್ಳುವ. ಅಷ್ಟೇ. ನಂತರ ಓದಿನ ನೆನಪಾದ ಕೂಡಲೆ ಮರೆತುಬಿಡುವ. ಅಬ್ದುಲ್ಲಾ ಮಾವ ಒಮ್ಮೆ ಮನೆಗೆ ಬಂದು ವಿಚಾರಿಸಿದರು. ಅಮ್ಮ ಅಳುತ್ತಲೇ ನಡೆದದ್ದೆಲ್ಲವನ್ನು ಹೇಳಿದಳು.

ಎರಡು ದಿನ ಕಳೆದು ಅಪ್ಪ ಮನೆಗೆ ಹಿಂತಿರುಗಿದರು. ಸೈಕಲ್ ಶಬ್ದ ಕೇಳಿ ಅವನು ಎದ್ದು ನಿಂತ. 'ತೆಕೋಳೊ, ತೆಕೊಂಡುಹೋಗಿ ನಿಮ್ಮ ಅಮ್ಮನ ಹತ್ರ ಕೊಡು' ಮೀನಿನ ಬುಟ್ಟಿಯನ್ನು ಕೊಟ್ಟರು. ಬುಟ್ಟಿ ತುಂಬಾ ಸೌಂದಳೆ ಮೀನುಗಳು. ಒಲೆ ಹಚ್ಚುತ್ತಿದ್ದ ಅಮ್ಮನ ಪಕ್ಕದಲ್ಲಿ ಇಟ್ಟು ಅವನು ಹಿಂತಿರುಗಿದ.

ಆ ವಾರದ ಭಾನುವಾರ ಬೆಳಗ್ಗೆ ಅವರೊಂದಿಗೆ ಸೈಕಲ್ ನೂಕಿಕೊಂಡು ಕೋಳಿ ಮಾರಾಟಕ್ಕೆ ಅವನು ಹೋದ. ಮುಗಿಸಿಕೊಂಡು ಹಿಂತಿರುಗುವಾಗ, ಮಾಂಸದ ಅಂಗಡಿಯ ಪಕ್ಕದಲ್ಲಿ ಅಬ್ದುಲ್ಲಾ ನಿಂತಿರುವುದನ್ನು ನೋಡಿ ಅಪ್ಪನೂ ನಿಂತರು. ಅವರ ರೀತಿ ಅವನಿಂದ ತಕ್ಷಣ ನಿಲ್ಲಲಾಗಲಿಲ್ಲ. ಅಭ್ಯಾಸದಂತೆ ಸ್ವಲ್ಪ ದೂರ ಸೈಕಲ್ ಮುಂದಕ್ಕೆ ಹೋದನಂತರವೇ ನಿಂತ.

'ಬ್ರೇಕ್ ಹಿಡಿದು ನಿಲ್ಲಿಸದೆ, ಯಾಕೆ ಗಾಡಿಹಿಂದೇನೆ ಓಡಿಹೋಗಿ ನಿಲ್ಲಿಸ್ತೀಯ?' ಎಂದು ಅಬ್ದುಲ್ಲಾ ಮಾವ ಅವನನ್ನು ನೋಡಿ ಕೇಳಿದರು. 'ಅವನಿಗೆ ಬ್ರೇಕ್ ಹಿಡಿಯಲು ಗೊತ್ತಿಲ್ಲ. ಸೈಕಲ್ ಓಡಿಸಲೂ ಗೊತ್ತಿಲ್ಲ. ಬರಿ ತಿನ್ನೋಕ್ ಗೊತ್ತು' ಎಂದು ಅಪ್ಪ ಕಹಿಯಾಗಿ ಉತ್ತರಿಸಿದರು. 'ಹಾಗ' ಎಂದು ಅಬ್ದುಲ್ಲಾ ಮಾವ ಆಶ್ಚರ್ಯದಿಂದ ನೋಡಿದರು.

'ಇಷ್ಟು ದೊಡ್ಡ ಹುಡುಗ ಸೈಕಲ್ ಓಡಿಸದಿದ್ದರೆ ಹೇಗಪ್ಪಾ? ಇಲ್ಲಿ ಬಾ, ನಾನ್ ಕಲಿಸ್ತೀನಿ.' ಎನ್ನುತ್ತಾ ಮುತ್ತುಸಾಮಿಯ ಹತ್ತಿರ ಬಂದರು. ಅವನಿಗೆ ಆ ಕ್ಷಣವೇ ಕೈಕಾಲು ನಡುಗ ತೊಡಗಿತು. 'ಬಾಪ್ಪ, ಏನೂ ಆಗಲ್ಲ' ಎನ್ನುತ್ತ ಅವನನ್ನು ಎಳೆದು ಸೈಕಲ್ಲಿನಲ್ಲಿ ಕೂರಿಸಿದಾಗ, ನಡುಕದಿಂದ ಕಾಲುಗಳನ್ನು ಸರಿಯಾಗಿ ಊರಲಾಗದೆ, ಸೈಕಲಿನೊಂದಿಗೆ ಅವನು ಅವರ ಮೇಲೆ